
ಕೈಯಿಂದ ಸ್ನಾನ ಮಾಡಿಸಿಕೊಳ್ಳುವ ಕಿಟ್ಟಿಗೆ ಅತ್ತೆಯ ಬಗ್ಗೆ ಅಪಾರ ಪ್ರೀತಿ ಇದೆ. ಅತ್ತೆಯೇ ಹೋದ ಮೇಲೆ ಇಲ್ಲಿದ್ದು ಏನು ಮಾಡಲಿ ಎಂಬ ನಿರ್ವಾತ ಸ್ಥಿತಿ ಕಿಟ್ಟಿಯನ್ನು ವ್ಯಾಪಿಸಿಕೊಳ್ಳುತ್ತದೆ. ಆ ಮೂಲಕ ಕಾದಂಬರಿ ಮುಕ್ತಾಯಗೊಳ್ಳುತ್ತದೆಯೇ ವಿನಃ ಕಿಟ್ಟಿಯ ಪಾತ್ರ ಮುಕ್ತಾಯಗೊಳ್ಳುವುದಿಲ್ಲ. ನನ್ನಂಥವನ ಬದುಕಿನ ಯಾವುದೋ ಘಟನೆಗಳ ಜೊತೆಯಲ್ಲಿ ಕಿಟ್ಟಿ ಮುಂದುವರಿಯುತ್ತಾ ಸಾಗುತ್ತಾನೆ.

ಕಿಟ್ಟಿಗೆ ಶಾಲೆ ಎಂದರೆ ಬೇಸರ. ಆದರೆ ಅತ್ತೆಯ ಮಮತೆ, ನಾಟಕ ಆಡಿಸುವ ಸಂದರ್ಭ, ಓಕುಳಿಯಾಟ, ಕಾಡು, ನಾಗಿಯ ಸ್ನೇಹ ಇವುಗಳೇ ಕಿಟ್ಟಿಗೆ ಸಂಭ್ರಮ ತರುವ ವಿಚಾರವಾಗಿತ್ತು. ಶಾಲೆ ಮತ್ತು ಮದರಸಾಗೆ ತಪ್ಪಿಸಿಕೊಳ್ಳುವುದರಲ್ಲಿ ನಾನು ಎತ್ತಿದ ಕೈ ಎಂದು ಬೇರೆ ಹೇಳಬೇಕೇ?. ಅವಕಾಶ ಸಿಕ್ಕಿದಾಗೆಲ್ಲಾ ಕಾಡಿನೊಳಗೆ, ಹೊಳೆಯ ಬದಿಯಲ್ಲಿ, ತೋಟದೊಳಗೆ ಅವಿತುಕೊಂಡು ಶಾಲೆಗೆ ಚಕ್ಕರ್ ಹಾಕುತ್ತಿದ್ದ ನಾನು ಊರಿನಲ್ಲಿ ಈದ್ ಮಿಲಾದ್ ಹಬ್ಬದ ಪ್ರಯುಕ್ತ ಮಸೀದಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಚರಿಸುವಾಗ, ಶಾಲೆಯಲ್ಲಿ ವಾರ್ಷಿಕೋತ್ಸವ, ಕಾರ್ಯಕ್ರಮಗಳ ತಯಾರಿಗೆ ತಪ್ಪದೇ ಹಾಜರಾಗುತ್ತಿದ್ದೆ. ಇವುಗಳೇ ನನಗೂ ಸಂಭ್ರಮದ ಸಂಗತಿಗಳಾಗಿದ್ದವು. ಕೆಲವು ಬಾರಿ ಶಾಲೆಗೆ ಚಕ್ಕರ್ ಹಾಕಿ ಕಾಡಿನೊಳಗೆ ಅವಿತುಕೊಂಡಾಗ ಅಲ್ಲಲ್ಲಿ ಕಳ್ಳತನದಿಂದ ಇಸ್ಪೀಟು ಆಡುವ ಗುಂಪು, ಭಟ್ಟಿ ಸಾರಾಯಿ ಕಾಯಿಸಿ ಅದನ್ನು ಕಾಡಿನೊಳಗಿಟ್ಟು ಮಾರುವ ಮಣಿಗೌಡನಂಥವರು, ಲೈಂಗಿಕ ಸಂಗದಲ್ಲಿ ತೊಡಗುವ ಗಂಡು– ಹೆಣ್ಣುಗಳನ್ನು ಸಹಜವಾಗಿ ಕಂಡರೂ ಆ ವಯಸ್ಸಿಗೆ ಅದು ನನಗೆ ಅರ್ಥವಾಗದ ಕ್ರಿಯಾವಿಧಿಯೇ ಆಗಿತ್ತು.

ಆದರೂ ಕಿಟ್ಟಿಯ ಮಾವ ಚಂದ್ರೇಗೌಡ ಹಾಗೂ ಬಸಕ್ಕ, ಆಳು ಹನುಮ ಹಾಗೂ ಕಲ್ಯಾಣಿ, ಸಾವಿತ್ರಮ್ಮ ಹಾಗೂ ಭಾಸ್ಕರ, ಅಯ್ನೋರು ಮತ್ತು ಕಾಳಿ, ಕೆಂಚ ಹಾಗೂ ದೇವಿ ಇವರುಗಳ ಲೈಂಗಿಕ ಬದುಕಿನ ಪ್ರಶ್ನೆಯನ್ನು ಕಿಟ್ಟಿಯ ಅರಿವಿನ ಇರವಿಗೆ ನಿಲುಕಿದೆಯೋ...ಇಲ್ಲವೋ ಎಂಬುದನ್ನು ಅಸ್ಪಷ್ಟ ಚಿತ್ರಣಗಳ ಮೂಲಕ ಕಾಣಿಸುವ ಕ್ರಮವೊಂದನ್ನು ಕಾದಂಬರಿಕಾರರು ಮಾಡಿದ್ದಾರೆ. ಹಿರಿಯರ ಕಲುಷಿತಗೊಂಡ ಭಾವಪ್ರಪಂಚವನ್ನು ಕಿಟ್ಟಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿದೆಯೇ? ಎಂಬ




ಪ್ರಶ್ನೆಯನ್ನು ಕನ್ನಡ ವಿಮರ್ಶೆ ಈಗಾಗಲೇ ಕೇಳಿದೆ.

ಇನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ ವ್ಯಾಸಂಗ ಮಾಡುವಾಗ ಲಂಕೇಶರ 'ಹುಳಿಮಾವಿನ ಮರ' ಆತ್ಮಕಥೆಯಲ್ಲಿ ಬರುವ ಲಂಕೇಶರ ಬಾಲ್ಯಕ್ಕೂ 'ಕಾಡು' ಕಾದಂಬರಿಯ ಕಿಟ್ಟಿಯ ಪಾತ್ರಕ್ಕೂ ಸಾಮ್ಯತೆ ಇದೆ ಎಂಬಂತೆ ನನಗನ್ನಿಸಿತ್ತು. ಇದಕ್ಕೆ ಕಾರಣ ಹೆಚ್ಚಿನ ಗ್ರಾಮೀಣ ಪ್ರದೇಶದ ಬಾಲ್ಯಕಾಲದ ಕಥನಗಳೂ ಒಂದೇ ಬಗೆಯಲ್ಲಿ ಇರುವುದೇ ಆಗಿದೆ ಎಂಬುದು ನನ್ನ ಅನಿಸಿಕೆ. ಪಂಚಾಯಿತಿಯಲ್ಲಿ ಕೆಂಚನಿಗೆ ಹುಣಸೆ ಸೆಬ್ಬೆಯಿಂದ ಹೊಡೆಯುವ ಸಂದರ್ಭ, ಆಳು ಕರಿಯನ ಜೊತೆಯಲ್ಲಿ ಕಾಡು ಅಲೆಯುವಾಗ, ಓಕುಳಿಯಾಟದಲ್ಲಿ ಚನ್ನೂರ ಚಂದ್ರೇಗೌಡರ ಮೇಲೆ ಮಾಡುವ ದಾಳಿ, ಅತ್ತೆ ಕಮಲಮ್ಮನ ಮೇಲೆ ಶಿವಗಂಗ ಚನ್ನೂರ ತಂಡ ಎಸಗುವ ದೌರ್ಜನ್ಯ ಇವೇ ಮುಂತಾದವು ಕಿಟ್ಟಿಯಲ್ಲಿ ಪುಕ್ಕಲುತನದ ಸ್ಥಾಯಿಭಾವವೊಂದನ್ನು ಉದ್ದೀಪಿಸುತ್ತಾ ಸಾಗಿದೆ.

ಭಯವೇ ಪುಕ್ಕಲುತನವಾಗಿ, ಪುಕ್ಕಲುತನವೇ